ಆ) ಈಗಿನ ಸಹಕಾರ ಮಂತ್ರಿಗಳಾಗಿರುವ ಶ್ರೀ ಹೆಚ್. ಏಕಾಂತಯ್ಯನವರು ದಿನಾಂಕ. ೧೬–೧೧–೧೯೭೩ ರಿಂದ ೩–೪–೧೯೭೭ರವರೆವಿಗೆ ಈ ಸಂಘದ ಅಧ್ಯಕ್ಷರಾಗಿ ಮೂರು ವರ್ಷ ನಾಲ್ಕು ತಿಂಗಳು ಹದಿನೇಳು ದಿವಸಗಳ ಸೇವೆ ಸಲ್ಲಿಸಿರುತ್ತಾರೆ.

ಇ) ಈ ಸಂಘವು ತನ್ನ ಕಾರ್ಯಚಟುವಟಿಕೆಗಳನ್ನು ನಡೆಸಲು ಮತ್ತು ಅಭಿವೃದ್ಧಿಪಡಿಸಲು ಅಂದರೆ ಹತ್ತಿ ಗಿರಣಿ ಬೆಂತ್ತು ಸಂಸ್ಕರಣೆ ಘಟಕವನ್ನು ಸ್ಥಾಪಿಸಲು ಹಾಗೂ ಗೋದಾಮುಗಳನ್ನು ನಿರ್ಮಾಣ ಮಾಡಲು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಮತ್ತು ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು ಪಡೆಯಲು ೨೦ ಲಕ್ಷ ರೂ. ಗಳ ಯೋಜನೆಯನ್ನು ತಯಾರಿಸಿ ಒಪ್ಪಿಸಲಾಗಿತ್ತು. ಆದರೆ ಸಂಘಕ್ಕೆ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಯೋಜನೆಯಡಿ ಆರ್ಥಿಕ ನೆರವು ದೊರೆಯದಿದ್ದುದರಿಂದ ಸಂಘದ ಚಟುವಟಿಕೆಗಳು ಕುಂಠಿತಗೊಂಡವು. ಸಂಘದ ಕಾರ್ಯಕಲಾಪಗಳು ಸ್ಥಗಿತಗೊಂಡುದಲ್ಲದೆ ೧೯೮೦–೮೧ ರಿಂದ ಸರ್ವಸದಸ್ಯರ ಸಭೆಗಳನ್ನು ಕೂಡ ಜರುಗಿಸಿರಲಿಲ್ಲ. ಆದ್ದರಿಂದ ದಿನಾಂಕ ೩–೪–೮೪ ರಂದು ಸಂಘವನ್ನು ಸಮಾಪನಗೊಳಿಸಿ ಆದೇಶ ಹೊರಡಿಸಲಾಯಿತು.

ಈ) ಸಂಘದಲ್ಲಿ ಸಂಸ್ಕರಣ ಘಟಕಕ್ಕೆ ಆರ್ಥಿಕ ನೆರವು ದೊರೆಯದಿದ್ದುದರಿಂದ ಒದಗಿಸಿದ ದಂಸ್ಥಿತಿಗೆ ಹಾಲಿ ಸಹಕಾರ ಸಚಿವರು ಕಾರಣ ಕರ್ತರಲ್ಲ ಆರ್ಥಿಕ ನೆರವು ದೊರೆಯದಿದ್ದುದೇ ಮುಖ್ಯ ಕಾರಣ.

ವಿಧವಾ ಪಾಸಾಶನ, ವೈದ್ಯಾಪ್ಯ ಪಾಸಾಶನ ಹಾಗೂ ತಾಳಿಭಾಗ್ಯ ಯೋಜನೆಗಳ ಬಗ್ಗೆ

೧೭೦. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ವಿಧವಾ ಪಾಸಾಶನ, ವೈದ್ಯಾಪ್ಯ ಪಾಸಾಶನ ಹಾಗೂ ತಾಳಿಭಾಗ್ಯ ಯೋಜನೆಗಳ ಮೇರೆಗೆ ಪ್ರತಿಫಲ ಪಡೆದುಕೊಂಡಿರುವ ಮಹಿಳೆಯರ ಸಂಖ್ಯೆಯೆಷ್ಟು? (ಕಾರ್ಯ ಕ್ರಮವಾರು ಹಾಗೂ ಜಿಲ್ಲಾವಾರು ವಿವರ ಒದಗಿಸಬೇಕಾಗಿ ವಿನಂತಿ).

ಆ) ತಾಳಿಭಾಗ್ಯ ಯೋಜನೆಯಲ್ಲಿ ಕೊಟ್ಟಿರುವ ತಾಳಿಗಳು ಸರಿಯಿಲ್ಲ ಎನ್ನುವ ಬಗ್ಗೆ ದೂರುಗಳು ಬಂದಿವೆಯೆ ?

ಇ) ಸದರಿ ೩ ಯೋಜನೆಗಳಿಗೆ ಮೆಚ್ಚಜವಾಗಿರುವ ಹಣದ ವಿವರಗಳನ್ನೊದಗಿಸುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಆ) ವಿಧವಾ ಪಾಸಾಶನ ... ೩,೫೮೯,೭೮೧
ತಾಳಿಯ ಭಾಗ್ಯ ... ೨,೦೩೮

ವೈದ್ಯಾಪ್ಯ ಪಾಸಾಶನ.—ವೈದ್ಯಾಪ್ಯ ವೇತನದ ವಿವರಗಳನ್ನು ಸಂಗ್ರಹಿಸಲಾಗುತ್ತಿದ್ದು ೧೧ ಜಿಲ್ಲೆಗಳಿಂದ ಬಂದಿರುವ ಅಂಕಿ ಅಂಶಗಳ ಪ್ರಕಾರ ವೈದ್ಯಾಪ್ಯ ವೇತನ ಪಡೆಯುತ್ತಿರುವ ಮಹಿಳೆಯರ ಸಂಖ್ಯೆ ೧೯೮೭–೮೮ರಲ್ಲಿ ೧,೨೪೪ ಇರುತ್ತದೆ.

(ಜಿಲ್ಲಾವಾರು ವಿವರವನ್ನು ಲಗತ್ತಿಸಿದೆ)

ಆ) ಇಲ್ಲ.

ಇ) ವಿಧವಾ ಪಾಸಾಶನ ... ೧೨,೯೬,೧೮,೬೯೫
ತಾಳಿಯ ಭಾಗ್ಯ ... ೮,೦೮,೬೩೬
ವೈದ್ಯಾಪ್ಯ ವೇತನ ... ೯,೩೨,೬೫,೨೦೦
(೧೯೮೭–೮೮ರಲ್ಲಿ)

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಳಿಭಾಗ್ಯದ ಫಲಾನುಭವಿಗಳು	ವಿಧವಾ ವೇತನದ ಫಲಾನುಭವಿಗಳು	ವೃದ್ಧಾಪ್ಯ ವೇತನ ಪಡೆಯುತ್ತಿರುವ ಮಹಿಳಾ ಫಲಾನುಭವಿಗಳು
೧	೨	೩	೪	೫
೧	ಬೆಂಗಳೂರು (ನಗರ)	೧೦೭	೯೮೬೯	...
೨	ಬೆಂಗಳೂರು (ಗ್ರಾಮಾಂತರ)	೭೧	೨೪೭೦೪	...
೩	ಮಂಡ್ಯ	೧೦	೮೨೮೬೬	೨೧೬೨೯
೪	ಮೈಸೂರು	೮೩	೪೦೫೯೯	೨೭೬೦೧
೫	ಮಡಕೇರಿ	೩೧	೬೯೯೩	೩೨೬೧
೬	ಮಂಗಳೂರು (ದ.ಕ.)	...	೨೭೮೦೨	೧೧೭೪೨
೭	ಕಾರವಾರ (ಉ.ಕ.)	...	೧೦೨೮೯	...
೮	ಚಿಕ್ಕಮಗಳೂರು	೧೧೪	೭೨೫೩	...
೯	ತುಮಕೂರು	೭೨	೧೮೫೮೪	...
೧೦	ಕೋಲಾರ	೩೦೬	೧೮೨೫೦	೧೭೦೮೪
೧೧	ಚಿತ್ರದುರ್ಗ	೧೦೩	೧೭೮೮೩	೯೪೩೦
೧೨	ಬಿಜಾಪುರ	...	೯೭೮೦	...
೧೩	ಶಿವಮೊಗ್ಗ	೧೬೪	೧೦೭೬೭	...
೧೪	ಬಳ್ಳಾರಿ	೪೩	೧೦೨೮೪	೧೯೪
೧೫	ಬೆಳಗಾಂ	೭೪	೧೮೬೦೪	೨೬೮೪೦
೧೬	ಧಾರವಾಡ	೮೧೧	೨೯೮೯	೬೧೭೨
೧೭	ಗುಲ್ಬರ್ಗಾ	..	೨೧೨೦೬	...
೧೮	ರಾಯಚೂರು	೩೯	೧೯೦೭೭	೫೨೦
೧೯	ಬೀದರ್	೧೦	೭೨೯೯	...
೨೦	ಹಾಸನ	...	೧೮೩೧೩	೨೬
	ಒಟ್ಟು	೨೦೩೮	೩೫೮೭೮೧೦	೧೨೪೪೯೯

ಬಹು ರಾಜ್ಯ ಸಹಕಾರ ಸಂಘಗಳ ಅಧಿನಿಯಮ

೩೮೨. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).—ಮಾನ್ಯ ಸಹಕಾರ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೇ ?

ಅ) ರಾಜ್ಯದಲ್ಲಿ ಬಹುರಾಜ್ಯ ಸಹಕಾರಿ ಸಂಘಗಳ ಅಧಿನಿಯಮ ಜಾರಿಗೆ ಬಂದಿದೆಯೇ ?ಹಾಗಿದ್ದಲ್ಲಿ ಯಾವಾಗಿನಿಂದ ?

ಆ) ಈ ಅಧಿನಿಯಮದ ಅನುಸಾರ ಎಷ್ಟು ಸಹಕಾರಿ ಸಂಘಗಳು ನೊಂದಾಯಿತವಾಗಿದೆ ? ಇವುಗಳಲ್ಲಿ ರಾಜ್ಯದಲ್ಲಿ ಸ್ಥಾಪಿತವಾಗಿರುವ ಸಂಸ್ಥೆಗಳೆಷ್ಟು ? ಹಾಗೂ ಬೇರೆ ರಾಜ್ಯಗಳಲ್ಲಿ ಸ್ಥಾಪಿತವಾಗಿ ಶಾಖೆಗಳನ್ನು ಹೊಂದಿರುವ ಸಂಸ್ಥೆಗಳೆಷ್ಟು ?

ಇ) ಸರ್ಕಾರ ಈ ಅಧಿನಿಯಮಕ್ಕೆ ನಿಯಮಾವಳಿ ರಚಿಸಿದೆಯೇ ?